RNU AIR DHARWAD

DECEMBER 16, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

ಮಂಡ್ಯ ಜಿಲ್ಲೆ, ಮಳವಳ್ಳಿಗೆ ಇಂದು ಮಧ್ಯಾಹ್ನ 2.45ಕ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಮಿಸಲಿದ್ದು, 3 ಗಂಟೆ 15 ನಿಮಿಷಕ್ಕೆ ಆಯೋಜಿತ, ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ, ಸಾವಿರದ 66ನೇ ಜಯಂತ್ಯುತ್ಸವವನ್ನು, ಉದ್ಘಾಟಿಸಲಿದ್ದಾರೆ. ವಿಶೇಷ ಭದ್ರತಾ ಪಡೆ – ಎಸ್.ಪಿ.ಜಿ. ತಂಡ, ಜಿಲ್ಲಾಧಿಕಾರಿ ಕುಮಾರ, ಐ.ಜಿ.ಪಿ. ಬೋರಲಿಂಗಯ್ಯ, ಭದ್ರತೆಗಳನ್ನು ಪರಿಶೀಲಿಸಿ, ವ್ಯಾಪಕ ಪೂರ್ವ ಸಿದ್ಧತೆ ಕೈಗೊಂಡಿದ್ದಾರೆ. ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಬೆಂಗಳೂರಿನ, ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್ – ಬಿ.ಎಚ್.ಇ.ಎಲ್., ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ, ಎಚ್.ಡಿ. ಕುಮಾರಸ್ವಾಮಿ ಅವರ ಮೂಲಕ, ಕೇಂದ್ರ ಸರ್ಕಾರಕ್ಕೆ, 109 ಕೋಟಿ ರೂಪಾಯಿಗಳ ಲಾಭಾಂಶದ ಚೆಕ್‌ಅನ್ನು ಹಸ್ತಾಂತರಿಸಿದೆ. 2024–25ರ ಹಣಕಾಸು ವ ್ಷದ ಲಾಭಾಂಶ, ಶೇಕಡ 100ರ ಷ್ಟ ಹೆಚ್ಚಾಗಿದೆ ಎಂದು, ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವಾಲಯ ತಿಳಿಸಿದೆ.

<><><>

ಧಾರವಾಡ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿಗಳ, ಸಮೂಹ ಸಂಪನ್ಮೂಲ ಕೇಂದ್ರದಲ್ಲಿ, ರಾಷ್ಟ್ರೀಯ ಮತದಾನ ದಿನಾಚರಣೆ ಅಂಗವಾಗಿ, ಧಾರವಾಡ ತಾಲೂಕು ಮಟ್ಟದ, ಪ್ರಬಂಧ ಸ್ಪರ್ಧೆ, 8 ರಿಂದ 10ನೇ ತರಗತಿಯ, ಪ್ರೌಢ ಶಾಲೆ ಮಕ್ಕಳಿಗೆ ಆಯೋಜಿತವಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ ರಾಮಕೃಷ್ಣ ಸದಲಗಿ, ಕಾರ್ಯಕ್ರಮ ಉದ್ಘಾಟಿಸಿದರು. ಚಿಕ್ಕಮಲ್ಲಿಗವಾಡದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ವಿನೋದಾ ನಡುವಿನಮನಿ ಪ್ರಥಮ ಸ್ಥಾನ ಪಡೆದರು. ಅಳ್ನಾವರದ, ಸಂತ ತೆರೆಸಾ ಪ್ರೌಢ ಶಾಲೆಯ, ಲಕ್ಷ್ಮೀ ಅಂಬಡಗಟ್ಟಿ ದ್ವಿತೀಯ ಸ್ಥಾನ ಹಾಗೂ ನರೇಂದ್ರ ಗ್ರಾಮದ, ಸೇವಂತಿ ಕೊಟಬಾಗಿ, ತೃತೀಯ ಸ್ಥಾನ ಪಡೆದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ, 'ಹೂವಿನ ತ್ಯಾಜ್ಯದಿಂದ ಮೌಲ್ಯವರ್ಧಿತ ಉತ್ಪನ್ನಗಳ' ಕೌಶಲಾಭಿವೃದ್ಧಿ ತರಬೇತಿ ಕಾರ್ಯಾಗಾರ ಜರುಗಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಬಿ.ಜಿ.ಹನುಮಂತರಾಯ ಮಾತನಾಡಿ, ದೇವಸ್ಥಾನ, ಮದುವೆ ಹಾಗೂ ಇತರ ಸಮಾರಂಭಗಳಲ್ಲಿ ಬಳಸುವ, ಹೂವುಗಳನ್ನು ಕಸದಂತೆ ಎಸೆಯಲಾಗುತ್ತಿದೆ. ಹೂವುಗಳನ್ನು ಒಣಗಿಸಿ ಪುಡಿ ಮಾಡಿ, ಅಗರಬತ್ತಿ, ಧೂಪ, ಗೃಹ ಅಲಂಕಾರಿಕ ವಸ್ತುಗಳನ್ನು ತಯಾರಿಸಬಹುದು. ಮಹಿಳೆಯರು ಕಾರ್ಯಾಗಾರದ ಸದುಪಯೋಗ ಪಡೆದು, ಸ್ವಯಂ ಉದ್ಯೋಗ ಕಂಡುಕೊಂಡು, ಆರ್ಥಿಕವಾಗಿ ಸಬಲರಾಗಬಹುದು, ಎಂದರು.

<><><>

ಉದ್ಯಮ ಪೋರ್ಟಲ್‌ನಲ್ಲಿ, ಇದು ವರೆಗೆ ಏಳು ಕೋಟಿಗೂ ಹೆಚ್ಚು, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ನೋಂದಾಯಿಸಿಕೊಂಡಿವೆ; ದೇಶಾದ್ಯಂತ ಅಂದಾಜು, **31** ಕೋಟಿ ಜನರಿಗೆ, ಉದ್ಯೋಗ ಒದಗಿಸಿವೆ ಎಂದು, ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ ಸಚಿವ, ಜಿತನ್ ರಾಮ್ ಮಾಂಝಿ ತಿಳಿಸಿದ್ದಾರೆ. ರಾಜ್ಯಸಭೆಯ ಪ್ರಶ್ನೋತ್ತರ ಅವಧಿಯಲ್ಲಿ, ಉತ್ತರಿಸಿದ ಸಚಿವರು, ಮಧ್ಯಮ, ಸಣ್ಣ ಮತ್ತು ಅತಿಸಣ್ಣ, ಉದ್ಯಮಗಳನ್ನು ಸ್ಥಾಪಿಸಲು, ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸಲು, ಉದ್ಯಮ ಪೋರ್ಟಲ್ ಅನ್ನು, **2020** ರಲ್ಲಿ ಪ್ರಾರಂಭಿಸಲಾಯಿತು ಎಂದು, ಮಾಹಿತಿ ನೀಡಿದರು.

<><><>

ಪ್ರಧಾನಮಂತ್ರಿ ಕಿರು ಉದ್ದಿಮೆಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ – ಪಿ.ಎಂ.ಎಫ್.ಎಂ.ಇ. ಅಡಿ, ಸಾಲ ಸೌಲಭ್ಯ ಪಡೆದು, ಸ್ವಾವಲಂಬಿಯಾಗಿ, ವಿವಿಧ ಸಿಹಿ ಖಾದ್ಯಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಉಣಕಲ್ಲ ಗ್ರಾಮದ ರೂಪಾ ಶ್ರೀಹರಿ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶ್ರೀಮತಿ ರೂಪಾ ಶ್ರೀಹರಿ ಧ್ವನಿ **35** ಸೆಕೆಂದುಗಳು

<><><>

ಶೈಕ್ಷಣಿಕ ಗುಣಮಟ್ಟ ಮೇಲ್ದರ್ಜೆಗೇರಿಸಲು, ಕೃತಕ ಬುದ್ಧಿಮತ್ತೆಯನ್ನು ಉನ್ನತ ಶಿಕ್ಷಣದಲ್ಲಿ ಹೆಚ್ಚು ಬಳಸಿಕೊಳ್ಳಬೇಕು ಎಂದು, ರಾಜ್ಯ ಉನ್ನತ ಶಿಕ್ಷಣ ಪರಿ 'ತ್ತಿನ ಉಪಾಧ್ಯಕ್ಷ, ಎಸ್.ಆರ್. ನಿರಂಜನ ಹೇಳಿದ್ದಾರೆ. ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದ, ಗಣಕಯಂತ್ರ ವಿಜ್ಞಾನ ಅಧ್ಯಯನ ವಿಭಾಗ, ಪ್ರಧಾನಮಂತ್ರಿ ಉ ಾ ಯೋಜನೆ ಅಡಿ, ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಆಯೋಜಸಿರುವ, "ಕೃತಕ ಬುದ್ಧಿಮತ್ತೆಯ, ಜವಾಬ್ದಾರಿಯುತ ಬಳಕೆ" ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು. ಇಂದು ಸಮಾರೋಪಗೊಳ್ಳಲಿರುವ ಸಮ್ಮೇಳನದಲ್ಲಿ, ಕೃತಕ ಬುದ್ಧಿಮತ್ತೆ ಸಂಬಂಧಿ, **47** ಮಹತ್ವದ ಸಂಶೋಧನಾ ಪ್ರಬಂಧಗಳು, ಮಂಡನೆಯಾಗಲಿವೆ.

<><><>

ಕಲಬುರಗಿಯ, ಚೆನ್ನಣ್ಣ ವಾಲೀಕಾರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ಚೆನ್ನಣ್ಣ ವಾಲೀಕಾರ ಗೀತೆಗಳ, ಗಾಯನ ಸಮಾರಂಭವನ್ನು, ಕಲಬುರಗಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ, ಇಂದು ಆಯೋಜಿಸಿದೆ.

<><><>

ಹಾಸನ ಜಿಲ್ಲಾಧಿಕಾರಿ ಕಚೇರಿಯನ್ನು, ಬಾಂಬ್ ಮೂಲಕ ಸ್ಫೋಟಿಸುವುದಾಗಿ, ಬೆದರಿಕೆ ಇ-ಮೇಲ್ ಬಂದ ಹಿನ್ನೆಲೆ, ಬಾಂಬ್ ನಿಷ್ಕ್ರಿಯ ದಳ, ಜಿಲ್ಲಾಧಿಕಾರಿ ಕಚೇರಿಯನ್ನು, ಶೋಧಿಸಿತು. ಇ-ಮೇಲ್ ಬಗ್ಗೆ ಸೈಬರ್ ಅಪರಾಧ ತನಿಖಾ ವಿಭಾಗ, ತನಿಖೆ ಕೈಗೊಂಡಿದೆ. ಭದ್ರತೆ ದೃಷ್ಟಿಯಿಂದ, ಜಿಲ್ಲಾಧಿಕಾರಿ ಕಚೇರಿ ಹಾಗೂ ಸುತ್ತಲಿನ ಪ್ರದೇಶದಲ್ಲಿ, ಕಟ್ಟುನಿಟ್ಟಿನ ನಿಗಾ ವಹಿಸಲಾಗಿದೆ. ಹುಸಿ ಮಿಂಚಂಚೆಯಾಗಿರಬಹುದು ಎಂದು, ಜಿಲ್ಲಾಧಿಕಾರಿ ಸ್ಪಷ್ಟ ಪಡಿಸಿದ್ದಾರೆ.

<><><>

ರಾಜ್ಯಾದ್ಯಂತ, ಕೊರೆಯುವ ಚಳಿ ಮತ್ತು ಶೀತ ಗಾಳಿ ಬೀಸುವಿಕೆ, ಮುಂದುವರೆದಿದೆ. ರಾಜ್ಯದ ಕನಿಷ್ಠ ತಾಪಮಾನ, 10 ಡಿಗ್ರಿ ಸೆಲ್ಸಿಯಸ್ ಬೀದರ್, ಹಾವೇರಿ ಹಾಗೂ ದಾವಣಗೆರೆಯಲ್ಲಿ ದಾಖಲಾಗಿದೆ. ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಸೇರಿದಂತೆ, ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ, ಇಂದಿಗೂ ಚಳಿ ವಾತಾವರಣ ಇರಲಿದೆ.

ಬೀದರ್, ಕಲಬುರಗಿ, ವಿಜಯಪುರ, ಬೆಳಗಾವಿ, ಮೈಸೂರು, ಚಿಕ್ಕಮಗಳೂರು, ಹಾಸನದಲ್ಲಿ ಚಳಿ ಪ್ರಖರವಾಗಿರಲಿದೆ. ಸಾರ್ವಜನಿಕರು ಮುಂಜಾಗ್ರತೆ ವಹಿಸಲು, ಕೋರಲಾಗಿದೆ. ಕರಾವಳಿ, ದಕ್ಷಿಣ ಒಳನಾಡು, ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರೆಯಲಿದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.